

ತಂಗಿ ಸಾರ್ಥಕ ರಾತ್ರಿಯನ್ನಾಗಿಸಲು ಮನಸ್ಸು ಸೋತಿತು. ಕೋಳಿಗಳು ಮನೆಬಾಗಿಲಿಗೆ ಬಂದವೇ ಕೊಣಬೇವಿನ ಮರ ಏರುವುದಿಲ್ಲ. ಅವಕ್ಕೂ ನಮ್ದು ತಮ್ದು ಎಂಬುದೆಲ್ಲಾ ಇದ್ದು ಮನೆ ಮುಂದೆ ಕುಶಲೋಪರಿ ವಿಚಾರಿಸಿಕೊಳ್ಳುವೋಪಾದಿಯಲ್ಲಿ ಕ್ವಕ್ಕಕ್ಕ ಎಂದುಕೊಂಡು ಬಿದ್ದಿರುವ ಕಾಳು ಕಡ್ಡಿಯನ್ನ ಹುಡುಕಿ ಆದುಕೊಳ್ಳುವವು. ಮನೆಯೊಳಗಿಂದ ಬರುವ ರಂಗಮ್ಮ ಏನಾದರೂ ಕೈಯಿಂದ ಚೆಮ್ಮೋ ಚಿಮ್ಮುವಳೆಂದು ಅವಕ್ಕೂ ಗೊತ್ತಿತ್ತು. ಹೀಗೆ ಗಂಟೆಗಟ್ಟಲೆ ಮನೆ ಮುಂದೆ ಚಿತ್ತಾರ ಬಿಡಿಸುವ ಕೋಳಿಗಳು ಹೊತ್ತು ಮುಳುಗಿದಾಗಲೇ ಮರ ಏರುವುದು. 'ಮಾವ ಊರೂರು ಸುತ್ತಿ ಬಂದ್ಯೆತೆ, ಯಾವಾಗ ಉಂಡಿತ್ತೊ ಏನೊ, ಹೊತ್ತಿ ಮುಂಚೆ ಈ ಕೋಳಿನ ಹಿಡ್ಕಂಡು ಕುಯ್ಯನ ಅಂದ್ರೆ ಅವಿನ್ನು ಮರ ಏರ್ತಲೆ ಇಲ್ಲ' ಎಂದು ಯೋಚಿಸಿದ ರಂಗಯ್ಯ ತನ್ನ ಹಳೇ ಪ್ಲಾನ್ ಒಂದನ್ನ ಕಾರ್ಯಗತಗೊಳಿಸಲು ಸಿದ್ದನಾದ.

ಈ ಕೋಳಿಗಳು ಮರ ಏರಲು ಶುರುವಾದ ಮೇಲೆ ಯಾರೊ ಬರಬಾರದವರು ಬಂದ್ರು ಅಂತ ಮಧ್ಯಾಹ್ನದ ಹೊತ್ತು ಹಿಡಿಯಾಕೆ ಹೋದ್ರೆ ಹರ ಸಾಹಸ ಪಟ್ರೂ ಒಂದು ಕೋಳಿನೂ ಹಿಡಿಯಾಕೆ ಆಗ್ತಿರ್ಲಿಲ್ಲ. ರಂಗಮ್ಮ ಮನೆಯೊಳಿಕೆಲ್ಲ ರಾಗಿ ಆಕ್ಯಂಡು ಕಕ್ಕಕ್ಕ ಅಂತ ಕರುದ್ರು ಇನ್ನೇನು ಬಾಗ್ಲ ಹಾಕ್ಯಂಬೇಕು ಅನ್ನುವಾಗ ಪರ್‍ರನ ಪುಕ್ಕ ಕೈಯಿಗೆ ಕೊಟ್ಟು ಹಾರೋಗವು. ಇತ್ತ ಹಾಕಿದ ರಾಗಿನು ವೇಸ್ಟ್ ಆಗವು. ಇದುನ್ನ ಕಂಡ ರಂಗಯ್ಯ ಒಂದಿನ ತಂತ್ರ ಊಡಿದ್ದ. 'ಆಮೆ ತೊಟ್ಟಿಗೆ ಬಂದು ಬಿದ್ದೈತೆ, ಹಿಡ್ಕಂಡೋಗ್ ಬರ್‍ರಿ' ಅಂತ ಕೊರುಮ್ರಟ್ಟಿರ್‍ಗೆ ಹೇಳಿ ಕಳ್ಸಿದ್ದಕ್ಕಾಗಿ, ಕೊರುಮ್ರ ನರಸಯ್ಯ ಒಂದು ದೊಡ್ಡ ಮಂಕ್ರಿ ಹೆಣೆದು ಕೊಟ್ಟು ಆಮೆ ಹಿಡ್ಕಂಡು ಹೋಗಿದ್ದ. ಆ ಮಂಕ್ರಿ ಹಳೆದಾದ್ರು ರಂಗಯ್ಯುಂತ ಇತ್ತು. ಅದುನ್ನ ತಂದ ರಂಗಯ್ಯ ಹಟ್ಟಿಮುಂದುಕ್ಕೆ ತಂದು ಅರ್ಧ ಬಗ್ಗಿಸಿ, ಬಗ್ಗಿರ ಅದರೊಳಿಕೆ ಉದ್ದನೆ ದಾರದಿಂದ ಕಟ್ಟಿರುವ ಒಂದು ಮೋಟುಗೋಲ್ನ ಮಂಕ್ರಿ ಆತ್ಕಂಣಂಗೆ ಊರ್‍ಗೋಲಾಗಿ ನಿಲ್ಲಿಸಿ, ದಾರದ ಇನ್ನೊಂದು ತುದಿನ ದೂರದಲ್ಲೆಲ್ಲೊ ಹಿಡ್ಕಂಡು ಕೂತಿರನು. ರಂಗಮ್ಮ ಅದರೊಳಿಕೆ ರಾಗಿ ಹೆಸ್ತಿರಳು. ರಾಗಿ ಆಸೇಲಿದ್ದ ಕೋಳಿಗಳು ನಮ್ಮ ಮೇಲೆ ಮಂಕ್ರಿ ಬೀಳುತ್ತೆ ಎಂಬ ಪರಿವೆ ಇಲ್ಲದೆ ಅದರೊಳಿಕೆ ಬಂದು ಕಾಳ ಕುಕ್ಕಕೆ ಶುರುವಾಗವು. ಇಲ್ಲು ಒಂದು ಯಡವಟ್ಟು ಆಗದು. ರಾಗಿ ಆಸೆಗೆ ಊರೊಳಗಿದ್ದ ಎಲ್ಲ ಕೋಳಿಗಳು ಅದರೊಳಿಕೆ ಬಂದು ಮೆಯ್ಯಕೆ ಶುರುವಾಗವು. ಛೂ ಅಂತ ಓಡ್ಸಿರೆ ಎಲ್ಲವು ಹೋಗವು, ಬಂದ್ರೆ ಎಲ್ಲವು ಬರವು. ಯಾವಾಗ್ಲೊ ಒಮ್ಮೆ ಗುರುತಾಗಿದ್ದ ಕೋಳಿ ಬಂದು ಅದರೊಳಗೆ ಮೆಯ್ಯುವಾಗ ರಂಗಯ್ಯ ನೋಡಿ ದಾರ ಎಳೆದು ಬಿಡನು. ಕೋಳಿ ಸಿಗಾಕ್ಯಂಡು ಬಿಡದು. ಇದೇ ತಂತ್ರ ಉಪಯೋಗಿಸಿ ಯಾರಾರ ನೆಂಟ್ರು ಬಂದ್ರೆ ಮಧ್ಯಾಹ್ನದ ಹೊತ್ತು ಕೋಳಿ ಹಿಡ್ಕೊಡನು. ಇದು ಹೀಗೆ ನಡೀತಾ ಬಂದಿತ್ತು.

ಇನ್ನೂ ಕೊಣಬೇವಿನ ಮರ ಏರದೆ ಇರುವ ಕೋಳಿಯನ್ನ ಮಾವನ ಸಲುವಾಗಿ ಹೊತ್ತಿ ಮುಂಚೆ ಹಿಡಿದಾಕೋಣವೆಂದು ರಂಗಯ್ಯ ಮಂಕ್ರಿಗೆ ಮಾಮೂಲಿ ತಂತ್ರ ಹೂಡಿದ. ಈ ಹುಷಾರಿ ಅಂಡ ಬಂಡ ಒಮ್ಮೆ ಮಂಕ್ರಿಯೊಳಿಕೆ ಬಂದಿತಾದರೂ ಇನ್ನೇನು ಕೆಡವಿಕೊಳ್ಳಬೇಕೆನ್ನುವಷ್ಟರಲ್ಲಿ ತಪ್ಪಿಸಿಕೊಂಡು ಶಿಳ್ಳೆ ಹಾಕಿಕೊಂಡು ರನ್ನಿಂಗ್ ರೇಸ್ ಮಾಡಿಬಿಟ್ಟಿತು. ಬಿದ್ದಿದ್ದ ಮಂಕ್ರಿಯನ್ನ ಎತ್ತಿ ಮತ್ತೆ ಕಡ್ಡಿ ಸಿಗಿಸಿ ಹೊಂಚು ಹಾಕಲಾಯಿತು. ಈ ಬಾರಿ ಅದಕ್ಕಿಂತಲೂ ಪೊಗರಾಗಿದ್ದ ಹುಂಜವೊಂದು ಬಂದು ತಾನೇ ಮಂಕ್ರಿಯನ್ನ ಕೆಡವಿಕೊಂಡು ಅದರೊಳಗೆ ಒದರಾಡತೊಡಗಿತು. ಜೊತೆಗಾರ ಹುಂಜ ಮಂಕ್ರಿಯೊಳಗೆ ಬಿದ್ದಿದ್ದನ್ನ ದೂರದಿಂದಲೇ ಕತ್ತೆತ್ತಿಕೊಂಡು ನೋಡುತ್ತಿದ್ದ ಅಂಡ ಬಂಡ ಇನ್ನೂ ಪೇರಿಕಿತ್ತ. ಈ ತಂತ್ರವನ್ನ ಒಳಗಿಂದಲೇ ಗಮನಿಸುತ್ತಿದ್ದ ಕರಿಯಪ್ಪನವರು ಈಗ ಮಂಕ್ರಿಯೊಳಗೆ ಬಿದ್ದ ಹುಂಜ ಇನ್ನೂ ಜೋರಾಗಿರುವುದನ್ನ ಕಂಡು, 'ರಂಗಪ್ಪ ಅವ್ನು ಹೋದ್ರೆ ಏನು, ಇವ್ನಾರ ಬಿದ್ದವ್ನಲ್ಲ ತಗ' ಎಂದು ಆಚೆ ಬಂದರು. 'ಇದು ನಮ್ದಲ್ಲ ಕಣ್ ಮಾವ. ಯಾರ ಕಂಡರ್‍ದು' ಎಂದು ಮಂಕ್ರಿ ಎತ್ತಿ ಬಿದ್ದಿರುವ ಹುಂಜನನ್ನು ಬಿಟ್ಟು ಕಳುಹಿಸಿದ. ಕರಿಯಪ್ಪನವರು ಮಕ ಸಪ್ಪಗೆ ಮಾಡಿಕೊಂಡು ಮತ್ತೆ ಒಳಗೋಗಿ ಕುರ್ಚಿಮೇಲೆ ಕೂತು ರಂಗವ್ವ ಕಾಸಿ ಕೊಟ್ಟ ಕಾಪಿಯನ್ನು ಉರುಬತೊಡಗಿದರು. ರಂಗಯ್ಯನ